# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ 31-07-2010 ರಂದು ನಡೆದ ಸಭೆಯ ನಡವಳಿಗಳು

| ಹಾಜರಿದ್ದ ಸದಸ್ಯರುಗಳು | ಹಾಜರಿದ್ದ ಅಧಿಕಾರಿಗಳು |
|---|---|
| ಶ್ರೀಯುತರುಗಳಾದ : | |
| ಪಿ.ಎನ್.ಸದಾಶಿವ – ಅಧ್ಯಕ್ಷರು | ಅಪರ ಆಯುಕ್ತರು (ಆರೋಗ್ಯ/ಕಲ್ಯಾಣ/ಆಸ್ತಿಗಳು) |
| ಜಿ.ಮಂಜುನಾಥ ರಾಜು – ಸದಸ್ಯರು | ಉಪ ಆಯುಕ್ತರು(ಭೂಸ್ವಾಧೀನ) |
| ಎಂ.ಜಿ.ಜಯರತ್ನ – ಸದಸ್ಯರು | ಉಪ ಆಯುಕ್ತರು (ಆಡಳಿತ) |
| ಶಕೀಲಾ.ಎಂ – ಸದಸ್ಯರು | ಕೌನ್ಸಿಲ್ ಕಾರ್ಯದರ್ಶಿ |
| ಟಿ.ಎ.ಗಾಯಿತ್ರಿ – ಸದಸ್ಯರು | ಮುಖ್ಯ ಲೆಕ್ಕ ಅಧಿಕಾರಿ |
| ಕೆ.ಚಂದ್ರಶೇಖರ್ – ಸದಸ್ಯರು | ಹೆಚ್ಚುವರಿ ನಿರ್ದೇಶಕರು (ನಗರ ಯೋಜನೆ) |
| | ಜಂಟಿ ನಿರ್ದೇಶಕರು (ನಗರ ಯೋಜನೆ) |
| **ಗೈರು ಹಾಜರಿದ್ದ ಸದಸ್ಯರು** | ಸಹಾಯಕ ನಿರ್ದೇಶಕರು (ನಗರ ಯೋಜನೆ) |
| ಎನ್.ವೀರಣ್ಣ – ಸದಸ್ಯರು | ಸಹಾಯಕ ಆಯುಕ್ತರು (ಆಡಳಿತ-2)/(ನೇಮಕಾತಿ) |
| | ವಿಶೇಷ ಭೂಸ್ವಾಧೀನ ಅಧಿಕಾರಿ |
| | ತಹಸಿಲ್ದಾರ್ (ಭೂಸ್ವಾಧೀನ) |

### 01]. ವಿಷಯದ ಸಂಖ್ಯೆ :-ತೆಆಸ್ಥಾಸ/01/2010-11

ಆಯುಕ್ತರವರ ಟಿಪ್ಪಣಿ ಸಂಖ್ಯೆ : ಎಲ್/ಎ/ಕ್ಯೂ/ಸಿಆರ್/11/2010-11, ದಿನಾಂಕ : 25-06-2010 ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಮುಖ್ಯ ಕಛೇರಿಯ ಕಟ್ಟಡದ ಎದುರು ಭಾಗದಲ್ಲಿರುವ **"ಹಡ್ಸನ್ ಚರ್ಚ್"**ನ ಹಿಂಭಾದಲ್ಲಿ ಪ್ರಸ್ತುತ ಚಾಲ್ತಿಯಲ್ಲಿರುವ ಪೆಟ್ರೋಲ್ ಬಂಕ್ ಎದುರಿನ ರಸ್ತೆ ಕಿರಿದಾಗಿದ್ದು, ಈ ರಸ್ತೆಯಲ್ಲಿ ವಾಹನ ದಟ್ಟಣೆ ಹೆಚ್ಚಾಗಿರುವುದರಿಂದ ಸುಗಮ ವಾಹನ ಸಂಚರಕ್ಕೆ ತೀವ್ರ ತಡೆ ಉಂಟಾಗುತ್ತಿರುವ ಹಿನ್ನೆಲೆಯಲ್ಲಿ ಪೆಟ್ರೋಲ್ ಬಂಕ್ ಎದುರಿನ ರಸ್ತೆಯನ್ನು ಹಾಗೂ ವೃತ್ತವನ್ನು ವಿಸ್ತರಿಸುವ ಅವಶ್ಯಕತೆಯಿದ್ದು, ಅದಕ್ಕಾಗಿ ಪೆಟ್ರೋಲ್ ಬಂಕ್ ಇರುವ ಜಾಗವನ್ನು ಭೂಸ್ವಾಧೀನಪಡಿಸಿಕೊಳ್ಳಬೇಕಾಗಿರುತ್ತದೆ. ಈ ಬಗ್ಗೆ ಪೆಟ್ರೋಲ್ ಬಂಕ್ ಇರುವ ಜಾಗದ ಹಕ್ಕು ದಾಖಲೆ ಹಾಗೂ ಇತರೆ ಅಗತ್ಯ ದಾಖಲೆಗಳಾದ ಖಾತೆ ನಕಲು, ಆಸ್ತಿಯ ನಕ್ಷೆ, ಹಾಗೂ ಆಸ್ತಿಯ ವ್ಯಾಲ್ಯುವೇಷನ್‌ನನ್ನು ತಯಾರಿಸಿ, ಸಲ್ಲಿಸಲು ಮುಖ್ಯ ಅಭಿಯಂತರರು ( ಮೇಜರ್ ರೋಡ್ಸ್) ರವರನ್ನು  ಕೋರಲಾಗಿ ಸದರಿಯವರು ಕಡತ ತಯಾರಿಸಿ ನಕ್ಷೆ, ಖಾತಾ ನಕಲು, ಹಾಗೂ ವ್ಯಾಲ್ಯುವೇಷನ್ ತಃಖ್ತೆ ತಯಾರಿಸಿ, ಈ ಆಸ್ತಿಯನ್ನು ಭೂಸ್ವಾಧಿನಪಡಿಸಿಕೊಳ್ಳಲು ಕಾರ್ಯಪಾಲಕ ಅಭಿಯಂತರರು, ಟ್ರಾಫಿಕ್ ಇಂಜಿನಿಯರಿಂಗ್ ಸೆಲ್, ಬಿಬಿಎಂಪಿ, ಇವರು ದಿನಾಂಕ :  18-06-2010 ರಂದು ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಈ ಪ್ರಸ್ತಾವನೆಯನ್ನು ಪರಿಶೀಲಿಸಲಾಗಿ, ಸಂಪಂಗಿರಾಮನಗರದ ಎಲ್.ಎ. ನಂ.82 ರ ಸಿ.ಟಿ.ಎಸ್. ನಂ.4118ರ ದಾಖಲಾತಿಯಂತೆ, ಖಾತೆ ನಂ. 19/1 (ಹಳೆ ಸಿ.ಟಿ.ಎಸ್. ನಂ.19/1) ರಲ್ಲಿ, 457.1 ಚ.ಮೀ. ಎಂದು ದಾಖಲಾಗಿದ್ದು, ಅಖೈರಾಗಿ. ಸಿ.ಟಿಎಸ್. ನಂ. 4118 ಎಂದೂ, ಇದರ ಖಾತೆದಾರರು **"ಚರ್ಚ್ ಆರ್ಫ ಸೌತ್ ಇಂಡಿಯ"** ಎಂದು ಖಾತೆ ದಾಖಲಾಗಿರುತ್ತದೆ. ಈ ಆಸ್ತಿಯು ಸಹಾಯಕ ಕಂದಾಯ ಆಧಿಕಾರಿಗಳು, ವಸಂತನಗರ ಉಪ ವಿಭಾಗ, ಬಿಬಿಎಂಪಿ, ಇವರ ಕಛೇರಿ ವ್ಯಾಪ್ತಿಯಲ್ಲಿ ಬರುತ್ತಿದ್ದು, ಸಿಟಿ ಸರ್ವೆ ದಾಖಲೆಯಂತೆ ಹಾಗೂ ಸ್ಥಳದಲ್ಲಿ ಸರ್ವೆಯರ್‌ರವರು ಅಳತೆ ಮಾಡಿ

ಸಲ್ಲಿಸಿರುವ ನಕ್ಷೆಯಂತೆ ಸಿ.ಟಿ.ಎಸ್. ನಂ.4118 (ಹಳೆ ಸಿ.ಟಿ.ಎಸ್. ನಂ.19/1) ವಿಸ್ತೀರ್ಣ 457.10 ಚದರ ಮೀಟರ್‌ಗಳಾಗಿದ್ದು (4920.22 ಚ.ಅ), ಈ ವಿಸ್ತೀರ್ಣವನ್ನು ಭೂಸ್ವಾಧೀನಕ್ಕೆ ಪ್ರಸ್ತಾಪಿಸಲಾಗಿದೆ.

ಸರ್ಕಾರದ ಮಾರ್ಗಸೂಚಿ ದರದನ್ವಯ, ಈ ಆಸ್ತಿಯು ಇರುವ ರಸ್ತೆಯಲ್ಲಿ ಮಾರುಕಟ್ಟೆ ಬೆಲೆಯು ಚ.ಅ. ಒಂದಕ್ಕೆ 5000/– ರೂ.ಗಳು ಇರುತ್ತದೆ. ಈ ಮಾರುಕಟ್ಟೆ ಬೆಲೆಯನ್ನು ಪರಿಗಣಿಸಿದಾಗ ಈ ಆಸ್ತಿಯ ಭೂಸ್ವಾಧೀನಕ್ಕೆ ತಗುಲುವ ಪರಿಹಾರದ ಮೊತ್ತ (1894 ರ ಭೂಸ್ವಾಧೀನ ಕಾಯ್ದೆಯಡಿಯಲ್ಲಿ) ಈ ಕೆಳಕಂಡಂತಿರುತ್ತದೆ.

‘ಅ’

| | | |
|---|---|---|
| ಭೂಸ್ವಾಧೀನಪಡಿಸಿಕೊಳ್ಳುವ ಆಸ್ತಿಯ ಒಟ್ಟು ವಿಸ್ತೀರ್ಣ ಚ.ಮೀ 457.10 X 10.764 | 4920.22 ಚ.ಅ. | |
| ಮಾರ್ಗಸೂಚಿ ಬೆಲೆ ಚ.ಅ. 1ಕ್ಕೆ 5000/– ರೂ. ಗಳಂತೆ | 4920.22 x 5000 | 2,46,01,100–00 |
| ಈ ಪ್ರದೇಶದಲ್ಲಿ ಇರುವ ಪೆಟ್ರೋಲ್ ಬಂಕ್‌ನ ಒಟ್ಟು ಮೌಲ್ಯ | 16,23,229–00 | |
| ಇದರಲ್ಲಿ ಪುನಃ ಉಪಯೋಗಿಸಬಹುದಾದ ಸಾಮಾಗ್ರಿಗಳ ಮೌಲ್ಯವನ್ನು (Cost of re-usable material) ವಜಾಕರಿಸಿ | (–) 7,44,551–00 | |
| ನಿವ್ವಳ | 8,78,678–00 | 8,78,678–00 |
| | | 2,54,79,778–00 |
| ಈ ಮೊಬಲಗಿಗೆ 1894 ಭೂಸ್ವಾಧೀನ ಕಾಯ್ದೆಯನ್ವಯ ಕಲಂ 23(1)(ಎ) ರನ್ವಯ, ಮಾರುಕಟ್ಟೆ ಬೆಲೆಯ ಮೇಲೆ ಸಾಲಿಯಾನ ಶೇ.12% ಹೆಚ್ಚುವರಿ ಮಾರುಕಟ್ಟೆ ಬೆಲೆ 1 ವರ್ಷಕ್ಕೆ | | 30,57,573–00 |
| 1894 ರ ಭಾಸ್ವಾಧೀನ ಕಾಯ್ದೆಯ ಕಲಂ 23(2) ರನ್ವಯ ಶಾಸನಬದ್ಧ ಭತ್ಯೆ, ಶೇ. 30% ರಂತೆ | | 76,43,933–00 |
| | ಒಟ್ಟು | 3,61,81,284–00 |

‘ಆ’

<u>ಇತರೇ ವೆಚ್ಚಗಳು</u>

| | |
|---|---|
| ಆಡಿಟ್ ವೆಚ್ಚ ಶೇ.10 ರಷ್ಟು | 36,18,128–00 |
| ಸಿಬ್ಬಂದಿ ವೆಚ್ಚ ಶೇ.1 ರಷ್ಟು | 3,61,812–00 |
| ಪ್ರಕಟಣಾ ಚೆಚ್ಚ | 2,00,000–00 |
| ಒಟ್ಟು | 41,79,940–00 |
| (ಅ+ಆ) | 4,03,61,224–00 |

–3–

ಮೇಲ್ಕಂಡ ಸ್ವತ್ತಿನ ಭೂಪರಿಹಾರದ ಮೊತ್ತವು (ಅ+ಆ) ಒಟ್ಟು 4,03,61,224/– ರೂ.(ನಾಲ್ಕು ಕೋಟಿ ಮೂರು ಲಕ್ಷದ ಆರವತ್ತೋಂದು ಸಾವಿರದ ಎರಡುನೂರ ಇಪ್ಪತ್ನಾಲ್ಕು ರೂಪಾಯಿಗಳು ಮಾತ್ರ), ಈ ಕುರಿತು ಸೂಕ್ತ ತೀರ್ಮಾನಕ್ಕಾಗಿ ಮಂಡಿಸಿರುವ ಟಿಪ್ಪಣಿ.

**–ಮುಂದೂಡಿದೆ–**

## 02]. ವಿಷಯದ ಸಂಖ್ಯೆ :–ತೆಆಸ್ಥಾಸ/02/2010–11

ಆಯುಕ್ತರವರ ಟಿಪ್ಪಣಿ ಸಂಖ್ಯೆ : ಸಕಆ(ಮಾ–ಪೂ)ಪಿಆರ್/51/2010–11, ದಿನಾಂಕ : 19–05–2009 ರಲ್ಲಿ ವಿವರಿಸಿರುವಂತೆ ಪಾಲಿಕೆಯ ಅಧೀನದಲ್ಲಿ ಬರುವ ರೆಸಿಡೆನ್ಸಿ ರಸ್ತೆಯ ನಗರ ಪಾಲಿಕೆ ಕಟ್ಟಡದ 1ನೇ ಅಂತಸ್ತಿನ ಮಳಿಗೆ ಸಂಖ್ಯೆ : 02ನ್ನು ಇತ್ತೀಚೆಗೆ ಪಾಲಿಕೆಯ ಸುಪರ್ಧಿಗೆ ಪಡೆಯಲಾಗಿದ್ದು, ಸದರಿ ಮಳಿಗೆಯನ್ನು ಹಂಚಿಕೆ ಮಾಡಿಕೊಡುವಂತೆ ಕೋರಿ ಶ್ರೀಮತಿ. ಬಿ.ಕೆ.ನಾಗರತ್ನಮ್ಮ. ಲೇಟ್, ಕೆ.ಎಲ್.ಆರ್.ಪ್ರಕಾಶ್, ನಂ1527, 5ನೇ ಮುಖ್ಯ ರಸ್ತೆ, 4ನೇ ಅಡ್ಡರಸ್ತೆ, ಮರಿಯಪ್ಪನಪಾಳ್ಯ, ಬೆಂಗಳೂರು ರವರು ಮನವಿ ಸಲ್ಲಿಸಿ ಪರಿಶಿಷ್ಟ ಜಾತಿಗೆ ಸೇರಿದ್ದು, ವಿಧವೆಯಾಗಿರುವುದರಿಂದ ಜೀವನೋಪಾಯಕ್ಕಾಗಿ ಮಳಿಗೆಯನ್ನು ಹಂಚಿಕೆ ಮಾಡಬೇಕೆಂದು ಕೋರಿರುವರು. ಸದರಿಯವರಿಗೆ ಸಹಾಯ ಮಾಡುವಂತೆ ಮಾನ್ಯ ಮುಖ್ಯ ಮಂತ್ರಿಗಳು, ನಗರಾಭಿವೃದ್ಧಿ ಸಚಿವರು ಹಾಗೂ ಬಸವನಗುಡಿ ಶಾಸಕರು ಸಹ ಶಿಫಾರಸ್ಸನ್ನು ಮಾಡಿದ್ದು, ಪೂಜ್ಯ ಮಹಾಪೌರರು ಟಿಪ್ಪಣಿ ಮಂಡಿಸುವಂತೆ ಸೂಚಿಸಿರುವರು.

ಅದರಂತೆ ರೆಸಿಡೆನ್ಸಿ ರಸ್ತೆಯ ನಗರ ಪಾಲಿಕೆ ಕಟ್ಟಡದ 1ನೇ ಅಂತಸ್ತಿನ ಮಳಿಗೆ ಸಂಖ್ಯೆ : 2ನ್ನು ಪಾಲಿಕೆಯ ಸುಪರ್ಧಿನಲ್ಲಿದ್ದು, ಸದರಿ ಮನವಿದಾರರಾದ ಶ್ರೀಮತಿ.ಬಿ.ಕೆ.ನಾಗರತ್ನಮ್ಮ, ಲೇಟ್, ಕೆ.ಎಲ್ಲ.ಆರ್.ಪ್ರಕಾಶ್, ನಂ1527, 5ನೇ ಮುಖ್ಯರಸ್ತೆ, 4ನೇ ಅಡ್ಡರಸ್ತೆ, ಮರಿಯಪ್ಪನ ಪಾಳ್ಯ, ಬೆಂಗಳೂರು ರವರು ಪರಿಶಿಷ್ಟ ಜಾತಿಗೆ ಸೇರಿದ ವಿಧವೆ ಮಹಿಳೆಯಾಗಿರುವುದರಿಂದ ಸದರಿಯವರ ಮನವಿಯನ್ನು ಪರಿಗಣಿಸಿ ಸದರಿ ಮಳಿಗೆಗೆ ಹಿಂದಿನ ಪರವಾನಗಿದಾರರಿಗೆ ನೀಡಿದ್ದ ಮಾಹೆಯಾನ ಪರವಾನಗಿ ಶುಲ್ಕ ರೂ: 1153/–ರ ಬದಲಿಗೆ 3(ಮೂರು) ಪಟ್ಟು ಹೆಚ್ಚಿಸಿ 3(ಮೂರು) ವರ್ಷಗಳಿಗೆ ಹಂಚಿಕೆ ಮಾಡುವ ಬಗ್ಗೆ ತೀರ್ಮಾನಕ್ಕಾಗಿ ಮಂಡಿಸಿರುವ ಟಿಪ್ಪಣಿ.

**ನಿರ್ಣಯ :–ಆಯುಕ್ತರವರ ದಿನಾಂಕ 19–05–2009 ರ ಟಿಪ್ಪಣಿಯನ್ನು ಒಪ್ಪಿದೆ.**

## 03]. ವಿಷಯದ ಸಂಖ್ಯೆ :–ತೆಆಸ್ಥಾಸ/03/2010–11

ಆಯುಕ್ತರವರ ಟಿಪ್ಪಣಿ ದಿನಾಂಕ : 25–06–2010 ರಲ್ಲಿ ವಿವರಿಸಿರುವಂತೆ, ವಾರ್ಡ್–76ರ ಮಗರತ್ ರಸ್ತೆಯಲ್ಲಿರುವ ಪಾಲಿಕೆಯ ಜಂಟಿ ಸಹಬಾಗಿತ್ವದಡಿಯಲ್ಲಿ ಮೇ॥ಮೆವರಿಕ್ ಹೋಲ್ಡಿಂಗ್ ಪ್ರೈ.ಲಿ.ರವರು ವಾಣಿಜ್ಯ ಸಂಕೀರ್ಣ ಹಾಗೂ ಬಹು ಅಂತಸ್ತಿನ ವಾಹನ ನಿಲುಗಡೆ ಸಂಕೀರ್ಣವನ್ನು ನಿರ್ಮಿಸಲಾಗಿದ್ದು. ಪಾಲಿಕೆಗೆ ಸೇರಿದ ವಾಣೀಜ್ಯ ಸಂಕೀರ್ಣದ ಭಾಗವನ್ನು ಸದರಿ ಜಂಟಿ ಸಹಭಾಗಿತ್ವದಾರರಿಗೆ
ನಿರ್ವಹಿಸಲು ಕರಾರನ್ನು ಮಾಡಿಕೊಳ್ಳಲಾಗಿದೆ. ಅದರಂತೆ ಸದರಿ ಕಟ್ಟಡದಲ್ಲಿ 14 ಅಂತಸ್ತುಗಳು ಇದ್ದು, ಲೋಯರ್ ಬೇಸ್‌ಮೆಂಟ್, ಅಪ್ಪರ್ ಬೇಸ್‌ಮೆಂಟ್, ನೆಲಮಹಡಿ ಮತ್ತು 11 ಮೇಲು ಅಂತಸ್ತುಗಳನ್ನೊಳಗೊಂಡ ಕಟ್ಟಡವಾಗಿರುತ್ತದೆ. ಸದರಿ ಕಟ್ಟಡದಲ್ಲಿ 972 ನಾಲ್ಕು ಚಕ್ರದ ವಾಹನ ನಿಲುಗಡೆಗೆ ಅವಕಾಶ ಕಲ್ಪಿಸಲಾಗಿದೆ. ಈ 972ರಲ್ಲಿ 220 ಡೆವಲಪ್ಪರ್ ಶೇರು, 252 ಪಾಲಿಕೆಯ ಶೇರು ಇದ್ದು ಪಾಲಿಕೆಯ ಶೇರನ್ನು ಸಹ ಡೆವಲ್ಪರ್‌ದಾರರೊಂದಿಗೆ ಒಡಂಬಡಿಕೆ ಮಾಡಿಕೊಳ್ಳಲಾಗಿದೆ. ಉಳಿಕೆ 500 ಸಾರ್ವಜನಿಕ 4 ಚಕ್ರದ ವಾಹನಗಳ ನಿಲುಗಡೆಯಾಗಿರುತ್ತದೆ. ಈ 500 ಸಾರ್ವಜನಿಕರ ವಾಹನಗಳ ನಿಲುಗಡೆ ಸ್ಥಳವನ್ನು ಸಹ ಬರುವ ಆದಾಯದಲ್ಲಿ ಪಾಲಿಕೆಗೆ ಶೇಕಡ 51ರಷ್ಟನ್ನು ಪಾವತಿಸುವ ನಿಬಂಧನೆಯಂತೆ ಕರಾರನ್ನು ಮಾಡಿಕೊಂಡಿದ್ದು, ಸದರಿ ಅವಧಿಯು ದಿನಾಂಕ : 28–02–2008ಕ್ಕೆ ಮುಕ್ತಾಯವಾದ ಹಿನ್ನೆಲೆಯಲ್ಲಿ ಬರುವ ಸಾರ್ವಜನಿಕರ ಉಪಯೋಗಕ್ಕೆ ನಿರ್ಮಿಸಲಾಗಿರುವ 500 ನಾಲ್ಕು ಚಕ್ರದ ವಾಹನ ನಿಲುಗಡೆ ಸ್ಥಳವನ್ನು 2ವರ್ಷಗಳಿಗೆ ದಿನಾಂಕ 01–03–2008 ರಿಂದ 28–02–2010ರವರೆವಿಗೆ ಮೂಲ ಕರಾರಿನ ಷರತ್ತಿನಂತೆ ಪಾಲಿಕೆಗೆ ಶೇಕಡ 55ರಷ್ಟನ್ನು ಸಂದಾಯ ಮಾಡುವ ಷರತ್ತಿನಂತೆ ಆಡಳಿತಗಾರರ ನಿರ್ಣಯ ಸಂಖ್ಯೆ : 53/2008–2009 ದಿನಾಂಕ 16–04–2008ರ ನಿರ್ಣಯಿಸಿದ್ದು, ಸದರಿ ನಿರ್ಣಯವನ್ನು ಸರ್ಕಾರದ ಅನುಮೋದನೆಗೆ ಕಳುಹಿಸಿಕೊಡಲಾಗಿದೆ. ಇದುವರೆವಿಗೂ ಸರ್ಕಾರದ ಅನುಮೋದನೆಯಾಗಿರುವುದಿಲ್ಲ.

ತದನಂತರ ಮೇ॥ಮೆವರಿಕ್ ಹೋಲ್ಡಿಂಗ್ ಪ್ರೈ.ಲಿ.ರವರು ದಿನಾಂಕ: 16–04–2010 ರಂದು ಮನವಿ ಸಲ್ಲಿಸಿ ಕಾರರು ಪತ್ರದ ಷರತ್ತಿನಂತೆ ಮತ್ತೆ ಮೂರು ವರ್ಷಗಳಿಗೆ ಮುಂದುವರಿಸಲು ಹಾಗೂ ವಾಹನ ನಿಲುಗಡೆ ಸ್ಥಳವು ವೀಕ್ ಡೇಗಳಲ್ಲಿ ಖಾಲಿ ಇದ್ದು, ಇತರೆ ಖರ್ಚುಗಳು ಹೆಚ್ಚಾಗಿರುವುದರಿಂದ ಮೂಲ ಕಾರಿನಂತೆ ಶೇಕಡ 51:49ರಷ್ಟನ್ನು ಪಾವತಿಸುವ ನಿಬಂದನೆಯಂತೆ ಮುಂದುವರೆಸಲು ಕೋರಿರುವರು.

ಆದ್ದರಿಂದ ದಿನಾಮಕ : 28–02–2008ಕ್ಕೆ ವಾಹನ ನಿಲುಗಡೆ ಸ್ಥಳದ ಅವಧಿಯು ಮುಕ್ತಾಯವಾಗಿರುವುದರಿಂದ ದಿನಾಂಕ : 01–03–2010ರಿಂದ ವಾಹನ ನಿಲುಗಡೆ ಮ್ಯಾನೇಜ್‌ಮೆಂಟ್ ಕರಾರು ಪತ್ರದ ಪುಟ ಸಂಖ್ಯೆ : 06ರಲ್ಲಿರುವ, 6ನೇ ಷರತ್ತಿನಲ್ಲಿ ಪರಸ್ಪರ ಒಪ್ಪಂದದ ಮೇರೆಗೆ ಮುಂದಿನ ಅವಧಿಗೆ ನವೀಕರಿಸಬಹುದು ಎಂಬ ಅಂಶವನ್ನು ಪರಿಗಣಿಸಿ ಮಗರತ್ ರಸ್ತೆಯಲ್ಲಿರುವ ಜಂಟಿಸಹಭಾಗಿತ್ವದ ಕಟ್ಟಡದಲ್ಲಿರುವ ಸರ್ವಾಜನಿಕರ 500 ನಾಲ್ಕು ಚಕ್ರದ ಪಾವತಿ ಮತ್ತು ನಿಲುಗಡೆ ಶುಲ್ಕದಿಂದ ಬರುವ ಮೊತ್ತದ ಬಗ್ಗೆ ಈ ಕೆಳಕಂಡ ವಿಷಯಗಳ ಬಗ್ಗೆ ತೀರ್ಮಾನಿಸಬೇಕಾಗಿರುತ್ತದೆ.

1. ಹಾಲಿ ಇರುವ ಶೇಕಡ 55: 45ಅನ್ನು ಮುಂದುವರೆಸಲು ಅಥವಾ ಹೆಚ್ಚಿಸುವ ಬಗ್ಗೆ.
2. ಜಂಟಿ ಸಹಭಾಗಿತ್ವದಾರರು ಕೋರಿರುವ ಮನವಿಯಂತೆ ಮೂಲ ಕಾರಾರು ಪತ್ರದಲ್ಲಿ ಆಗಿರುವ ಶೇಕಡ 51:49ರಂತೆ ನಿಗಧಿಪಡಿಸುವ ಬಗ್ಗೆ.





3. ದಿನಾಂಕ : 01–03–2010ರಿಂದ 2 ವರ್ಷಗಳ ಅವಧಿಗೆ ಮೇ॥.ಮೆವರಿಕ್ ಹೋಲ್ಡಿಂಗ್ಸ್ ಪ್ರೈ.ಲಿ.ರವರನ್ನೇ ಮುಂದುವರೆಸುವ ಬಗ್ಗೆ ತೀರ್ಮಾನಕ್ಕಾಗಿ ಮಂಡಿಸಿರುವ ಟಿಪ್ಪಣಿ.

**–ಸ್ಥಳ ಪರಿಶೀಲನೆಗಾಗಿ ಮುಂದೂಡಿದೆ–**

## 04.] ವಿಷಯದ ಸಂಖ್ಯೆ :–ತೆ&ಆಸ್ಥಾಸ/04/2010–11

ಆಯುಕ್ತರವರ ಟಿಪ್ಪಣಿ ದಿನಾಂಕ : 09–06–2010 ರಲ್ಲಿ ವಿವರಿಸಿರುವಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಕಟ್ಟಡ ನಕ್ಷೆ ಮಂಜೂರಾತಿಗಾಗಿ ಪ್ರಸ್ತುತ ಮಾನ್ಯ ಆಯುಕ್ತರವರ ಸುತ್ತೋಲೆ ಸಂಖ್ಯೆ :–ಜೆಡಿಟಿಪಿ/ಸಿ2/ಪಿಆರ್/54/06–07 ದಿನಾಂಕ : 18–12–2007 ಹಾಗೂ ದಿನಾಂಕ 26–02–2008 ರ ಸುತ್ತೋಲೆಗಳನ್ವಯ ಶುಲ್ಕಗಳನ್ನು ವಿಧಿಸಲಾಗುತ್ತಿದೆ. ಈ ರೀತಿ ಪರಿಸ್ಕರಿಸಲಾದ ಶುಲ್ಕಗಳು ಅತೀ ಹೆಚ್ಚಾಗಿರುವುದರಿಂದ, ಇವುಗಳನ್ನು ಕಡಿಮೆಗೊಳಿಸಬೇಕೆಂದು ಹಲವಾರು ಮನವಿಗಳನ್ನು ಪಾಲಿಕೆಯಲ್ಲಿ ಸ್ವೀಕರಿಸಲಾಗಿದೆ.

ಹಾಲಿ ವಿಧಿಸಲಾಗುತ್ತಿರುವ ಶುಲ್ಕಗಳನ್ನು ಪರಿಶೀಲಿಸಿದಾಗ, ಪ್ರಾರಂಭಿಕ ಪ್ರಮಾಣಪತ್ರ ನೀಡುವುದಕ್ಕೆ ಈ ಹಿಂದೆ ಯಾವುದೇ ಶುಲ್ಕಗಳನ್ನು ವಿಧಿಸದೇ ಇದ್ದು, ಇದನ್ನು ಹೊಸದಾಗಿ ಪರಿಚಯಿಸಿರುವುದು ಕಂಡು ಬರುತ್ತದೆ. ಕೆ.ಎಂ.ಸಿ. ಕಾಯ್ದೆಯನ್ವಯ ನಕ್ಷೆ ಮಂಜೂರಾತಿ ನೀಡುವಾಗ ಮಾತ್ರ ಶುಲ್ಕಗಳನ್ನು ವಿಧಿಸಬಹುದಾಗಿದ್ದು, ಅರ್ಜಿದಾರರು ಮಂಜೂರಾದ ನಕ್ಷೆಯನ್ವಯ ಕಟ್ಟಡವನ್ನು ಕಟ್ಟಿದಲ್ಲಿ ಪ್ರಾರಂಭಿಕ ಪ್ರಮಾಣಪತ್ರ ಮತ್ತು ಸ್ವಾಧೀನಾನುಭವ ಪ್ರಮಾಣಪತ್ರ ನೀಡಲು ಪಾಲಿಕೆಗೆ ಅರ್ಜಿ ಸಲ್ಲಿಸಿದಲ್ಲಿ, ಇದನ್ನು ನೀಡುವುದು ಪಾಲಿಕೆಯ ಜವಬ್ದಾರಿಯಾಗಿರುತ್ತದೆ. ಇದನ್ನು ನೀಡುವುದಕ್ಕೆ ಶುಲ್ಕ ವಿಧಿಸಲು ಕೆ.ಎಂ.ಸಿ.ಕಾಯ್ದೆಯಲ್ಲಿ ಅವಕಾಶವಿರುವುದಿಲ್ಲ. ಅಲ್ಲದೇ, ನಕ್ಷೆ ಮಂಜೂರಾತಿ ಸಮಯದಲ್ಲಿ ಕಾಂಪೌಂಡ್ ನಿರ್ಮಾಣಕ್ಕಾಗಿ ವಿಧಿಸಲಾಗುವ ಶುಲ್ಕವು ಅನಾವಶ್ಯಕವೆಂದು ಅಭಿಪ್ರಾಯಿಸಲಾಗಿದೆ. ದಿನಾಂಕ : 08–10–2009ರ ಆಯುಕ್ತರವರ ಸಭೆಯ ನಡವಳಿಯಲ್ಲಿ ಇವುಗಳನ್ನು ರದ್ದುಗೊಳಿಸುವಂತೆ ತೀರ್ಮಾನಿಸಲಾಗಿರುವುದರಿಂದ, ಪ್ರಾರಂಭಿಕ ಪ್ರಮಾಣಪತ್ರ ನೀಡುವುದಕ್ಕೆ ಹಾಗೂ ಕಾಂಪೌಂಡ್ ಗೋಡೆ ನಿರ್ಮಾಣಕ್ಕೆ ವಿಧಿಸಲಾಗುವ ಶುಲ್ಕವನ್ನು ರದ್ದುಗೊಳಿಸಬಹುದಾಗಿದೆ.

ಕಟ್ಟಡ ನಿರ್ಮಾಣ ಸಮಯದಲ್ಲಿ ಉಲ್ಲಂಘನೆಗಳನ್ನು ನಿಯಂತ್ರಿಸುವ ಸಲುವಾಗಿ ಭದ್ರತಾ ಠೇವಣಿಯನ್ನು ವಿಧಿಸಲಾಗಿರುತ್ತದೆ. ಸ್ವಾಧೀನಾನುಭವ ಪ್ರಮಾಣಪತ್ರ ನೀಡುವಾಗ ಉಲ್ಲಂಘನೆಗಳು ಕಂಡು ಬಂದಲ್ಲಿ

ಭದ್ರತಾ ಠೇವಣಿಯನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುತ್ತದೆ. ಆದರೆ, ಶೇ 5 ರೊಳಗೆ ಉಲ್ಲಂಘನೆಗಳು ಕಂಡು ಬಂದಲ್ಲಿ ಇದಕ್ಕೆ ಪ್ರತ್ಯೇಕವಾಗಿ ದಂಡ ಶುಲ್ಕವನ್ನು ವಿಧಿಸಲಾಗುತ್ತಿರುವುದರಿಂದ, ಸ್ವಾಧೀನಾನುಭವ ಪ್ರಮಾಣಪತ್ರ ನೀಡುವಾಗ ದಂಡ ಮೊತ್ತ ಲೆಕ್ಕಾಚಾರ ಮಾಡಿ, ಇದನ್ನು ನಕ್ಷೆ ಮಂಜೂರಾತಿ ಸಮಯದಲ್ಲಿ ಪಾವತಿಸಲಾಗಿರುವ ಭದ್ರತಾ ಠೇವಣಿಯ ಮೊತ್ತದಲ್ಲಿ ಕಳೆಯಬೇಕಾಗುತ್ತದೆ. ದಂಡ ಮೊತ್ತವು ಭದ್ರತಾ ಠೇವಣಿಗಿಂತ ಹೆಚ್ಚಾಗಿದ್ದಲ್ಲಿ, ವ್ಯತ್ಯಾಸದ ಮೊತ್ತವನ್ನು ಅರ್ಜಿದಾರರಿಂದ

–6–



ಸ್ವಾಧೀನಾನುಭವ ಪ್ರಮಾಣಪತ್ರ ನೀಡುವ ಮುನ್ನ ಪಾವತಿಸಿಕೊಳ್ಳಬೇಕಾಗಿರುತ್ತದೆ. ದಂಡ ಮೊತ್ತವು ಭದ್ರತಾ ಠೇವಣಿಗಿಂತ ಕಡಿಮೆ ಇದ್ದಲ್ಲಿ, ವ್ಯತ್ಯಾಸದ ಮೊತ್ತವನ್ನು ಅರ್ಜಿದಾರರಿಗೆ ಹಿಂದಿರುಗಿಸಬೇಕಾಗುತ್ತದೆ. ಸ್ವಾಧೀನಾನುಭವ ಪ್ರಮಾಣಪತ್ರ ನೀಡುವಾಗ ಮೇಲೆ ವಿವರಿಸಿರುವಂತೆ ಕ್ರಮಕೈಗೊಳ್ಳುವುದು ಸೂಕ್ತವಾಗಿರುತ್ತದೆ.

ಇದಲ್ಲದೇ, ಸರ್ಕಾರದ ಆದೇಶದನ್ವಯ ಕಾರ್ಮಿಕ ಕಲ್ಯಾಣ ನಿಧಿಯನ್ನು ಪಾಲಿಕೆಯು ಪಾವತಿಸಿಕೊಂಡು ಸಂಬಂಧಿಸಿದ ಇಲಾಖೆಗೆ ಮೊತ್ತವನ್ನು ವರ್ಗಾಯಿಸಲಾಗುತ್ತದೆ. ಪ್ರಸ್ತುತ ಸಂಪೂರ್ಣ ಮೊತ್ತವನ್ನು ನಕ್ಷೆ ಮಂಜೂರಾತಿ ಸಮಯದಲ್ಲಿ ಪಾವತಿಸಿಕೊಳ್ಳಲಾಗುತ್ತಿದ್ದು, ಇದನ್ನು 3 ಹಂತಗಳಲ್ಲಿ–ನಕ್ಷೆ ಮಂಜೂರಾತಿ ಸಮಯದಲ್ಲಿ ಶೇ 20, ಪ್ರಾರಂಭಿಕ ಪ್ರಮಾಣಪತ್ರದ ಹಂತದಲ್ಲಿ ಶೇ 30 ಹಾಗೂ ಸ್ವಾಧೀನಾನುಭವ ಪ್ರಮಾಣಪತ್ರದ ಹಂತದಲ್ಲಿ ಉಳಿದ ಶೇ 50 ರಷ್ಟು ಪಾವತಿಸಿಕೊಳ್ಳುವುದು ಸೂಕ್ತವಾಗಿರುತ್ತದೆ.

ಕಟ್ಟಡ ನಕ್ಷೆ ಮಂಜೂರಾತಿ, ಪ್ರಾರಂಭಿಕ ಪ್ರಮಾಣಪತ್ರ ಹಾಗೂ ಸ್ವಾಧೀನಾನುಭವ ಪ್ರಮಾಣಪತ್ರ ನೀಡುವುದಕ್ಕೆ ಸಂಬಂಧಿಸಿದಂತೆ ಪ್ರಸ್ತುತ ವಿಧಿಸಲಾಗುತ್ತಿರುವ ಶುಲ್ಕಗಳನ್ನು ಮೇಲ್ಕಂಡ ಟಿಪ್ಪಣಿಯನ್ವಯ ಮಾರ್ಪಡಿಸಲು ಅನುಮೋದನೆ ಕೋರಿ ಮಂಡಿಸಿರುವ ಟಿಪ್ಪಣಿ.

**ನಿರ್ಣಯ :–ಆಯುಕ್ತರವರ ದಿನಾಂಕ 09–06–2010 ರ ಟಿಪ್ಪಣಿಯನ್ನು ಒಪ್ಪಿದೆ.**

**<u>05]. ವಿಷಯದ ಸಂಖ್ಯೆ :–ತೆಆಸ್ಥಾಸ/05/2010–11</u>**

ಆಯುಕ್ತರವರ ಟಿಪ್ಪಣಿ ಸಂಖ್ಯೆ : ಮು.ಅ(ಮಾ)/ಪಿಆರ್/69/2010–11 ರಲ್ಲಿ ವಿವರಿಸಿರುವಂತೆ ಬೆಂಗಳೂರು ಮಹಾನಗರ ಪಾಲಿಕೆಯ ವಿಸ್ತೀರ್ಣವು ಸುಮಾರು 225 ಚ.ಕಿ.ಮೀ.ಗಳಾಗಿದ್ದು. 100ಜನ ನಗರಸಭಾ ಸದಸ್ಯರು ಹಾಗೂ 13 ಜನ ವಿಧಾನಸಭಾ ಸದಸ್ಯರು ಇದ್ದಾಗ ಅಂದಿನ ಅವಶ್ಯಕತೆಗಳಿಗೆ ಅನುಗುಣವಾಗಿ ಕೆಂಪೇಗೌಡ ಪೌರ ಸಭಾಂಣ ಕಟ್ಟಡವನ್ನು ನಿರ್ಮಾಣ ಮಾಡಲಾಗಿತ್ತು.

ಈಗ ಬೆಂಗಳೂರು ಮಹಾನಗರ ಪಾಲಿಕೆಯು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಾಗಿ ಮಾರ್ಪಟ್ಟಿದ್ದು ಸುಮಾರು 820 ಚ.ಕಿ.ಮೀ.ಗಳ ವ್ಯಾಪ್ತಿಯುಳ್ಳ ವಿಸ್ತಾರವಾದ ಪ್ರದೇಶವಾಗಿದ್ದು. 198 ಜನ ನಗರಸಭಾ ಸದಸ್ಯರು ಹಾಗೂ 28 ಜನ ವಿಧಾನ ಸಭಾಸದಸ್ಯರನ್ನು ಒಳಗೊಂಡಿರುತ್ತದೆ. ಇಂದಿನ ಅವಶ್ಯಕತೆಗಳಿಗೆ ಅನುಗುಣವಾಗಿ ಕೌನ್ಸಿಲ್ ಸಭಾಂಗಣವನ್ನು ನಿರ್ಮಾಣ ಮಾಡಬೇಕಾಗಿರುತ್ತದೆ ಹಾಗೂ ವಾಹನ ನಿಲುಗಡೆಗೆ ಹೆಚ್ಚಿನ ಸೌಲಭ್ಯವನ್ನು ಕಲ್ಪಿಸಬೇಕಾಗಿರುತ್ತದೆ.

*ಪಾಲಿಕಾ ಭವನ ಕಟ್ಟಡ ನಿರ್ಮಾಣಕ್ಕೆ ಸಂಬಂಧಿಸಿದಂತೆ ಎರಡು ರೀತಿಯ ವಿನ್ಯಾಸಗಳನ್ನು ಪಡೆಯಲು ಉದ್ದೇಶಿಸಲಾಗಿದೆ.*

–7–



1. ಅನೆಕ್ಸ್ ಕಟ್ಟಡ ಬಿಟ್ಟು ಲಭ್ಯವಿರುವ ಖಾಲಿ ನಿವೇಶನದ ವಿಸ್ತೀರ್ಣ ಸುಮಾರು 7700 ಚ.ಮೀ.ಗಳಲ್ಲಿ ಕಟ್ಟಡ ನಿರ್ಮಿಸುವುದು.
2. ಅನೆಕ್ಸ್ ಕಟ್ಟಡ ಸೇರಿ ಲಭ್ಯವಿರುವ ಖಾಲಿ ನಿವೇಶನದ ವಿಸ್ತೀರ್ಣ ಸುಮಾರು 13200 ಚ.ಮೀ.ಗಳಲ್ಲಿ ಕಟ್ಟಡ ನಿರ್ಮಿಸುವುದು.

*ಪ್ರಸ್ತಾವಿಕ ಪಾಲಿಕೆ ಭವನ ಕಟ್ಟಡದಲ್ಲಿ ಕೆಳಕಂಡ ಸೌಲಭ್ಯಗಳನ್ನು ಕಲ್ಪಿಸಲು ಉದ್ದೇಶಿಸಲಾಗಿರುತ್ತದೆ.*

1. ಕೌನ್ಸಿಲ್ ಹಾಲ್–300 ಆಸನಗಳನ್ನು ವ್ಯವಸ್ಥೆಯ ಸಭಾಂಗಣ ಹಾಗೂ ಪ್ರತ್ಯೇಕ ಊಟದ ಕೊಠಡಿ
2. ಕಮಿಟಿ ಹಾಲ್ ಸಂಖ್ಯೆ 15: ಸುಮಾರು 40 ಆಸನಗಳ ವ್ಯವಸ್ಥೆಯೊಂದಿಗೆ ಸಭೆ ನಡೆಸಲು ಅವಕಾಶ ಕಲ್ಪಿಸುವುದು ಹಾಗೂ ಆಪ್ತ ಕಾರ್ಯದರ್ಶಿ ಕೊಠಡಿ.
3. ಮೀಟಿಂಗ್ ಹಾಲ್ ಸಂಖ್ಯೆ 2: ಸುಮಾರು 250 ಹಾಗೂ 100 ಆಸನಗಳ ವ್ಯವಸ್ಥೆಯೊಂದಿಗೆ ಸಭೆ ನಡೆಸಲು ಅವಕಾಶ ಕಲ್ಪಿಸುವುದು.
4. ಪೂಜ್ಯ ಮಹಾಪೌರರ ಕೊಠಡಿ ( Ante Room ಸೇರಿ ) ಸುಮಾರು 100 ಆಸನಗಳ ವ್ಯವಸ್ಥೆಯೊಂದಿಗೆ ಸಭೆ ನಡೆಸಲು ಅವಕಾಶಕಲ್ಪಿಸುವುದು ಹಾಗೂ ಆಪ್ತ ಕಾರ್ಯದರ್ಶಿಗಳ ಕೊಠಡಿ ಮತ್ತು ಕಛೇರಿಗೆ ಸ್ಥಳಾವಕಾಶ.
5. ಪೂಜ್ಯ ಉಪ ಮಹಾಪೌರರ ಕೊಠಡಿ, ಸುಮಾರು 50ಆಸನಗಳ ವ್ಯವಸ್ಥೆಯೊಂದಿಗೆ ನಡೆಸಲು ಅವಕಾಶ ಕಲ್ಪಿಸುವುದು ( Ante Room ಸೇರಿ ) ಮತ್ತು ಆಪ್ತ ಕಾರ್ಯದರ್ಶಿಗಳ ಕೊಠಡಿ.
6. ಆಡಳಿತ ಪಕ್ಷದ ನಾಯಕರ ಕೊಠಡಿ, ಸುಮಾರು 25 ಆಸನಗಳ ವ್ಯವಸ್ಥೆಯೊಂದಿಗೆ ಸಭೆ ನಡೆಸಲು ಅವಕಾಶ ಕಲ್ಪಿಸುವುದು ( Ante Room ಸೇರಿ ) ಹಾಗೂ ಆಪ್ತ ಕಾರ್ಯದಶಿಗಳ ಕೊಠಡಿ.
7. ವಿರೋಧ ಪಕ್ಷದ ನಾಯಕರ ಕೊಠಡಿ, ಸುಮಾರು 25 ಆಸನಗಳ ವ್ಯವಸ್ಥೆಯೊಂದಿಗೆ ಸಭೆ ನಡೆಸಲು ಅವಕಾಶ ಕಲ್ಪಿಸುವುದು ( Ante Room ಸೇರಿ ) ಹಾಗೂ ಆಪ್ತ ಕಾರ್ಯದಶಿಗಳ ಕೊಠಡಿ.
8. ಮಾಜಿ ಮಹಾಪೌರರುಗಳಿಗೆ–30 ಆಸನಗಳ ವ್ಯವಸ್ಥೆಯ ಕೊಠಡಿ.
9. ಮಹಿಳಾ ನಗರಸಭಾ ಸದಸ್ಯರುಗಳ ಕೊಠಡಿ–100 ಆಸನಗಳ ವ್ಯವಸ್ಥೆಯ ಕೊಠಡಿ.
10. ಕೌನ್ಸಿಲ್ ವಿಭಾಗದ ಕಛೇರಿಗಳು ಸಂಖ್ಯೆ–2.
11. ಮಾನ್ಯ ಆಯುಕ್ತರರವರ ಕೊಠಡಿ, ಸುಮಾರು 50 ಆಸನಗಳ ವ್ಯವಸ್ಥೆಯೊಂದಿಗೆ ಸಭೆ ನಡೆಸಲು ಅವಕಾಶ ಕಲ್ಪಿಸುವುದು (Ante Room ಸೇರಿ) ಹಾಗೂ ಆಪ್ತ ಕಾರ್ಯದಶಿಗಳ ಕೊಠಡಿ.

12. ವಿಶೇಷ ಆಯುಕ್ತರವರ ಕೊಠಡಿ, ಸುಮಾರು 25 ಆಸನಗಳ ವ್ಯವಸ್ಥೆಯೊಂದಿಗೆ ಸಭೆ ನಡೆಸಲು ಅವಕಾಶ ಕಲ್ಪಿಸುವುದು ( Ante Room ಸೇರಿ ) ಹಾಗೂ ಆಪ್ತ ಕಾರ್ಯದಶಿಗಳ ಕೊಠಡಿ ಮತ್ತು ಕಛೇರಿಗೆ ಸ್ಥಳಾವಕಾಶ
13. ಅಪರ ಆಯುಕ್ತರು (ಆಡಳಿತ) ರವರ ಕೊಠಡಿ (Ante Room ಸೇರಿ) ಹಾಗೂ ಆಪ್ತ ಕಾರ್ಯದಶಿಗಳ ಕೊಠಡಿ.
14. ಉಪ ಆಯುಕ್ತರು (ಆಡಳಿತ) ರವರ ಕೊಠಡಿ (Ante Room ಸೇರಿ) ಹಾಗೂ ಆಪ್ತ ಕಾರ್ಯದಶಿಗಳ ಕೊಠಡಿ.
15. ಪೋಲಿಸ್ ಮಹಾ ನಿರೀಕ್ಷಕರು, ಬಿ.ಎಂ.ಟಿ.ಎಫ್ ರವರ ಕೊಠಡಿ (Ante Room ಸೇರಿ) ಹಾಗೂ ಆಪ್ತ ಕಾರ್ಯದಶಿಗಳ ಕೊಠಡಿ.
16. ಪ್ರಧಾನ ಅಭಿಯಂತರರ ಕೊಠಡಿ (Ante Room ಸೇರಿ) ಹಾಗೂ ಆಪ್ತ ಕಾರ್ಯದಶಿಗಳ ಕೊಠಡಿ.

–8–



17. ತಾಂತ್ರಿಕ ಸಲಹೆಗಾರರ ಕೊಠಡಿ (Ante Room ಸೇರಿ).
18. ನಿರ್ದೇಶಕರು, ಮಾಹಿತಿ ತಂತ್ರಜ್ಞಾನ (Ante Room ಸೇರಿ).
19. ಮುಖ್ಯ ಆರೋಗ್ಯಾಧಿಕಾರಿ ಕೊಠಡಿ (Ante Room ಸೇರಿ) ಹಾಗೂ ಆಪ್ತ ಕಾರ್ಯದಶಿಗಳ ಕೊಠಡಿ.
20. ಸಾರ್ವಜನಿಕ ಸಂಪರ್ಕಾಧಿಕಾರಿ ಕೊಠಡಿ ಹಾಗೂ ಕಛೇರಿಗೆ ಸ್ಥಳಾವಕಾಶ.
21. ಡಿ.ಸಿ.ಎಫ್.ರವರ ಕೊಠಡಿ (Ante Room ಸೇರಿ) ಹಾಗೂ ಆಪ್ತ ಕಾರ್ಯದಶಿಗಳ ಕೊಠಡಿ.
22. ಮುಖ್ಯ ಲೆಕ್ಕಾಧಿಕಾರಿಗಳ ಕೊಠಡಿ.
23. ಕಾನೂನು ಸಲಹೆಗಾರರ ಕೊಠಡಿ.
24. ಮುಖ್ಯ ಆರ್ಥಿಕ ಅಧಿಕಾರಿ ಕೊಠಡಿ.
25. ಜಂಟಿ ನಿರ್ದೇಶಕರು (ನಗರ ಯೋಜನೆ).
26. ಜಂಟಿ ಆಯುಕ್ತರು (ಕಲ್ಯಾಣ) ರವರ ಕೊಠಡಿ.
27. ಜಂಟಿ ಆಯುಕ್ತರು (ಆರೋಗ್ಯ ಮತ್ತು ಜಾಹಿರಾತು) ರವರ ಕೊಠಡಿ.
28. ಮುಖ್ಯ ಲೆಕ್ಕ ಪರಿಶೋಧಕರವರ ಕೊಠಡಿ.
29. ನಿಯಂತ್ರಣ ಕೊಠಡಿ.
30. ಜಂಟಿ ಆಯುಕ್ತರು (ಆಸ್ತಿಗಳು) ರವರ ಕೊಠಡಿ
31. ಅಂತರಿಕ ಭದ್ರತಾ ಕೊಠಡಿ.
32. ಭದ್ರತಾ ಕೊಠಡಿ–ಅಗ್ನಿಶಾಮಕ ದಳ.
33. ಬ್ಯಾಂಕ್.
34. ಅಂಚೆ ಕಛೇರಿ.
35. ಉಪಹಾರ ಗೃಹ.

ಈ ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ, ಪಾಲಿಕಾ ಭವನ ನಿರ್ಮಾಣ ಇದರಲ್ಲಿ ವಾಹನ ನಿಲುಗಡೆಗೆ ಅವಕಾಶ ಕಲ್ಪಿಸಲು 3 ರಿಂದ 4 ತಳಮಹಡಿಗಳನ್ನು ನಿರ್ಮಿಸಿ ನವೀನ ರೀತಿಯ, ಸುಸಜ್ಜಿತವಾದ, ಹಾಗೂ ಆಕರ್ಷಣೀಯವಾಗಿ ( State of the Art ) ನಗರದಲ್ಲಿ ಒಂದು ಕೇಂದ್ರ ಬಿಂದುವಾಗಿ ರೂಪಿಸುವ ಕಟ್ಟಡ ನಿರ್ಮಿಸಲು ಒಟ್ಟಾರೆಯಾಗಿ ಯೋಜನೆಯನ್ನು ತಯಾರಿಸಲು ಟೆಂಡರ್ ಕರೆದು ಸಮಾಲೋಚಕರನ್ನು ನಿಯೋಜಿಸಲು ಅನುಮೋದನೆ ಕೋರಿ ಮಂಡಿಸಿರುವ ಟಿಪ್ಪಣಿ.

**–ಮುಂದೂಡಿದೆ–**

**06]. ವಿಷಯದ ಸಂಖ್ಯೆ :–ತೆಆಸ್ಥಾಸ/06/2010–11**

ಆಯುಕ್ತರವರ ಟಿಪ್ಪಣಿ ಸಂಖ್ಯೆ : ಎ3(1)ಪಿಆರ್/71/2009–10, ದಿನಾಂಕ : 26–06–2010 ರಲ್ಲಿ ವಿವರಿಸಿರುವಂತೆ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿರವರು ಪತ್ರದ ಸಂಖ್ಯೆ:BWSSB/CE(P)/ACE(P)/TA/AE/1649/09-10 ದಿನಾಂಕ: 18–11–2009ರಂತೆ ಮನವಿಯನ್ನು ಸಲ್ಲಿಸಿ, ಬಾಗಲುಗುಂಟೆ ಎಂ.ಇ.ಇ ಬಡಾವಣೆಯ ಸರ್ವೆ ನಂ:13ರಲ್ಲಿರುವ 1ಎಕರೆ 6ಗುಂಟೆ ಪಾರ್ಕ್ ಜಾಗದಲ್ಲಿ 23 x 25 ಅಡಿಗಳ ಜಾಗವನ್ನು ನೆಲಮಟ್ಟದ ಜಲಸಂಗ್ರಹಣಗಾರ ನಿರ್ಮಿಸಲು 23 x 25 ಅಡಿಗಳ ಜಾಗವನ್ನು ಹಸ್ತಾಂತರಿಸಲು ಕೋರಿರುತ್ತಾರೆ.

ಈ ಬಗ್ಗೆ ಸಹಾಯಕ ಕಾರ್ಯಪಾಲಕ ಅಭಿಯಂತರರು (ಟಿ.ದಾಸರಹಳ್ಳಿ) ವಿಭಾಗರವರು ಸದರಿ ಸ್ವತ್ತು ಬಿ.ಬಿ.ಎಂ.ಪಿ. ಒಡೆತನಕ್ಕೆ ಸೇರಿದೆ ಎಂದು ವರದಿ ಮಾಡಿರುತ್ತಾರೆ ಹಾಗೂ ಅಪರ ಆಯುಕ್ತರು (ದಾಸರಹಳ್ಳಿ) ರವರು ಸಹ ಸದರಿ

–

9–



ಜಾಗದಲ್ಲಿ ನೆಲಮಟ್ಟದ ನೀರು ಸಂಗ್ರಹಣ ತೊಟ್ಟಿಯನ್ನು ನಿರ್ಮಿಸಲು ಜಲ ಮಂಡಳಿರವರಿಗೆ ಹಸ್ತಾಂತರಿಸಬಹುದೆಂದು ಶಿಫಾರಸ್ಸು ಮಾಡಿರುತ್ತಾರೆ.

ಆದ್ದರಿಂದ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯವರು ಕೋರಿರುವ ಸ್ಥಳವನ್ನು ಸಾರ್ವಜನಿಕರ ಹಿತದೃಷ್ಟಿಯಿಂದ ಹಸ್ತಾಂತರಿಸಲು ಸೂಕ್ತ ತೀರ್ಮಾನಕ್ಕಾಗಿ ಮಂಡಿಸಿರುವ ಟಿಪ್ಪಣಿ.

**ಯ :– ಆಯುಕ್ತರವರ ಟಿಪ್ಪಣಿಯಲ್ಲಿ ಸ್ಥಳದ ಅಳತೆಯು ಅಡಿಗಳಲ್ಲಿದ್ದು, ಸರ್ವೆಯರ್ ತಯಾರಿಸಿರುವ ಕಚ್ಚಾ ನಕ್ಷೆಯಲ್ಲಿನ ಸ್ಥಳದ ಅಳತೆಯು ಮೀಟರ್‌ನಲ್ಲಿದ್ದು, ಇದರಲ್ಲಿ ಯಾವುದು ಸರಿಯಿದೆ ಎಂಬುದನ್ನು ಕೂಲಂಕುಷವಾಗಿ ಪರಿಶೀಲಿಸಿ, ಕಡತವನ್ನು ಪುನರ್ ಮಂಡಿಸಲು ಹಿಂದಿರುಗಿಸಿದೆ.**

## 07] ವಿಷಯದ ಸಂಖ್ಯೆ :–ತೆಆಸ್ಥಾಸ/07/2010–11

ಆಯುಕ್ತರವರ ಟಿಪ್ಪಣಿ ಸಂಖ್ಯೆ:ಬಿ12(1ಬಿ)/ಪಿಆರ್/07/2009–10 ದಿನಾಂಕ:13–07–2010 ರಲ್ಲಿ ವಿವರಿಸಿರುವಂತೆ ಸರ್ಕಾರವು ದಿನಾಂಕ : 16–01–2007ರಲ್ಲಿ 7 ನಗರ ಸಭೆಗಳು, 1 ಪುರಸಭೆ ಮತ್ತು 110 ಹಳ್ಳಿಗಳನ್ನು ಬಿ.ಎಂ.ಪಿ.ಗೆ ಸೇರಿಸಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯನ್ನಾಗಿ ರಚಿಸಿ ಆಧಿಸೂಚನೆ ಹೊರಡಿಸಿರುತ್ತದೆ. ಹಾಗೂ ದಿನಾಂಕ:15–07–2009ರನ್ವಯ ಬಿ.ಬಿ.ಎಂ.ಪಿ.ಗೆ 198 ವಾರ್ಡ್‌ಗಳನ್ನು ಸೃಜಿಸಿ ಆದೇಶ ಹೊರಡಿಸಲಾಗಿರುತ್ತದೆ. ಅದರಂತೆ, 198 ವಾರ್ಡ್‌ಗಳಿಂದ ನಗರ ಪಾಲಿಕೆ ಸದಸ್ಯರುಗಳು ದಿನಾಂಕ:28–03–2010ರಂದು ನಡೆದ ಚುನಾವಣೆ ಮೂಲಕ ಆಯ್ಕೆಯಾಗಿದ್ದು, ಮುಂದೆ ನಡೆಯಬಹುದಾದ ಪಾಲಿಕೆಯ ಕೌನ್ಸಿಲ್ ಸಭೆ ಸಂದರ್ಭಗಳಲ್ಲಿ ಒಟ್ಟು 277 ಸದಸ್ಯರುಗಳು ಸಭೆಗೆ ಭಾಗವಹಿಸುವ ಹಕ್ಕುಳ್ಳವರಾಗಿರುತ್ತಾರೆ.

ಕೆ.ಎಂ.ಸಿ. ಕಾಯ್ದೆ 1976 ಸೆಕ್ಷನ್ (77 ಮತ್ತು 78) ರಂತೆ ಪ್ರತಿ ತಿಂಗಳು ನಡೆಯುವ ಒಂದು ಮಾಸಿಕ ಸಭೆ ಕನಿಷ್ಠ ಎರಡು ತಿಂಗಳಿಗೆ ಅಥವಾ ಆಗ್ಗಾಗೆ ಅಭಿವೃದ್ಧಿ ವಿಷಯಗಳ ಕಡತಗಳ ಕುರಿತು ತೀರ್ಮಾನ/ನಿರ್ಣಯಗಳನ್ನು ಕೈಗೊಳ್ಳುವ ಸಭೆ ಆಯವ್ಯಯ ಮಂಡನೆಯ ಮೇಲೆ 5 ರಿಂದ 6 ದಿನಗಳ ಕಾಲ ನಡೆಯುವ ಆಯವ್ಯಯ ಸಭೆ ಹೀಗೆ ಪಾಲಿಕೆಯ ಸಭೆಗಳು ನಡೆಯಲಿದ್ದು, ಈ ಸಭೆಗಳ ನಡವಳಿಗಳನ್ನು ದಾಖಲಿಸಲು ಪಾಲಿಕೆಯ ಕೌನ್ಸಿಲ್ ವಿಭಾಗದಲ್ಲಿ ಕೌನ್ಸಿಲ್ ಕಾರ್ಯದರ್ಶಿಗಳ ಅಧೀನದಲ್ಲಿ ಒಂದು ರೆಕಾರ್ಡಿಂಗ್ ಶಾಖೆ ಕಾರ್ಯನಿರ್ವಹಿಸುತ್ತಿದೆ.

ಪ್ರಸ್ತುತ, ರೆಕಾರ್ಡಿಂಗ್ ಶಾಖೆಯಲ್ಲಿ 1–ರೆರ್ಕಾಡಿಂಗ್ ಅಧಿಕಾರಿ ಹಾಗೂ 8–ವರದಿಗಾರರ ಹುದ್ದೆಗಳಿಂದ ಕಾರ್ಯನಿರ್ವಹಿಸಲಾಗುತ್ತಿದೆ. ಸದರಿ ಹುದ್ದೆಗಳನ್ನು, ಈ ಹಿಂದೆ ಇದ್ದ 100 ಜನ ಪಾಲಿಕೆ ಸದಸ್ಯರು, ಲೋಕ ಸಭಾ ಸದಸ್ಯರು / ರಾಜ್ಯ ಸಭಾ ಸದಸ್ಯರು /ಅಧಿಕಾರಿಗಳಿಗೆ ಅನ್ವಯವಾಗಿ ಮಾತ್ರ ಸೃಜಿಸಲಾಗಿರುತ್ತದೆ. ಪ್ರಸ್ತುತ ಪಾಲಿಕೆಯ ಒಟ್ಟು 277 ಜನ ಪಾಲಿಕೆಯ ಸದಸ್ಯರು ಮತ್ತು ಅಧಿಕಾರಿಗಳು ಭಾಗವಹಿಸುವ ಸಭೆಯ ಕಲಾಪದ ವಿಷಯಗಳನ್ನು ದಾಖಲು ಮಾಡಿಕೊಂಡು ಸಭೆಯ ನಡವಳಿಯನ್ನು ತಯಾರಿಸಲು ಹಾಲಿ ಇರುವ 8 ಮಂದಿ ವರದಿಗಾರರು ಮತ್ತು ಒಬ್ಬರು ರೆಕಾರ್ಡಿಂಗ್ ಅಧಿಕಾರಿಯಿಂದ ಕಷ್ಟಕರವಾಗುತ್ತದೆ. ಸದರಿ ವರದಿಗಾರರುಗಳಿಗೆ ಕೆಲಸದ ಹೆಚ್ಚಿನ ಒತ್ತಡ ಬೀಳುವುದಲ್ಲದೇ ಸಭೆಯ ಕಲಾಪಗಳು ಸುಗಮವಾಗಿ ನಡೆಯಲು ತೀವ್ರಕರವಾದ ತೊಂದರೆಯುಂಟಾಗಿತ್ತದೆ.

ಈ ಸಂಬಂಧ, ಉಲ್ಲೇಖಿತದಂತೆ, ಸರ್ಕಾರಕ್ಕೆ ಪಾಲಿಕೆಯ ಕೌನ್ಸಿಲ್ ವಿಭಾಗದ ರೆಕಾರ್ಡಿಂಗ್ ಶಾಖೆಯ ಕೆಲಸ ಕಾರ್ಯಗಳ ಹಿತದೃಷ್ಟಿಯಿಂದ ಪಾಲಿಕೆಗೆ ಹೆಚ್ಚುವರಿಯಾಗಿ 8 ವರದಿಗಾರರ ಹುದ್ದೆಗಳನ್ನು ಸೃಜಿಸಲು ಕೋರಿ ಪತ್ರ ಬರೆಯಲಾಗಿದ್ದು, ಈ ತಹಲ್ ವರೆವಿಗೂ ಯಾವುದೇ ಉತ್ತರ ಬಂದಿರುವುದಿಲ್ಲ.





ಈ ಹಿನ್ನೆಲೆಯಲ್ಲಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಕೌನ್ಸಿಲ್ ವಿಭಾಗಕ್ಕೆ ವರದಿಗಾರರ ವೃಂದದಿಂದ 01 ರೆಕಾರ್ಡಿಂಗ್ ಅಧಿಕಾರಿ ಹುದ್ದೆಯನ್ನು ಮತ್ತು ಕನ್ನಡ ಶೀಘ್ರಲಿಪಿಗಾರರ ವೃಂದದಿಂದ 10 ಕನ್ನಡ ವರದಿಗಾರರ ಹುದ್ದೆಗಳನ್ನು ಹಾಗೂ ಆಂಗ್ಲ ಶೀಘ್ರಲಿಪಿಗಾರರ ವೃಂದದಿಂದ 02 ಆಂಗ್ಲ ವರದಿಗಾರರ ಹುದ್ದೆಗಳನ್ನು ಮುಂಬಡ್ತಿ ಮೂಲಕ ಅರ್ಹ ನೌಕರರುಗಳಿಂದ ತುಂಬಲು ಸದರಿ ಒಟ್ಟು 13 ಹುದ್ದೆಗಳನ್ನು ಸೃಜಿಸಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ಅನುಮತಿ ಕೋರಿ ಮಂಡಿಸಿರುವ ಟಿಪ್ಪಣಿ.

**ನಿರ್ಣಯ :–ಆಯುಕ್ತರವರ ದಿನಾಂಕ 13–07–2010 ರ ಟಿಪ್ಪಣಿಯನ್ನು ಒಪ್ಪಿದೆ.**

**08] ವಿಷಯದ ಸಂಖ್ಯೆ :–ತೆಆಸ್ಥಾಸ/08/2010–11**

ಆಯುಕ್ತರವರ ಟಿಪ್ಪಣಿ ಸಂಖ್ಯೆ : ಬಿ12(2)/ಪಿಆರ್/85/2007–08, ದಿನಾಂಕ:21–07–2010 ರಲ್ಲಿ ವಿವರಿಸಿರುವಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿನ ಆರೋಗ್ಯ ಮತ್ತು ಶಿಕ್ಷಣ ಇಲಾಖೆಯಲ್ಲಿ ಖಾಲಿ ಇರುವ ಗ್ರೂಪ್–ಸಿ ಮತ್ತು ಗ್ರೂಪ್–ಡಿ ಹುದ್ದೆಗಳಾದ ಪೌರಕಾರ್ಮಿಕ/ಗ್ಯಾಂಗ್‌ಮನ್/ಶುಶ್ರೂಷಕಿಯರು/ಎ.ಎನ್.ಎಂ/ಫಾರ್ಮಾಸಿಸ್ಟ್/ಸಬ್ ರಿಜಿಸ್ಟರ್ ಹಾಗೂ ವಿವಿಧ ವೃಂದದ ಶಿಕ್ಷಕರ ಹುದ್ದೆಗಳನ್ನು ನಗರಪಾಲಿಕೆಯ ಕೆಲಸ ಕಾರ್ಯಗಳನ್ನು ಸುಗಮವಾಗಿ ನಡೆಸಲು ನೇರ ನೇಮಕಾತಿಯಿಂದ ತುಂಬಿಕೊಳ್ಳಲು ಸರ್ಕಾರವು ಈ ಕೆಳಕಂಡಂತೆ ಅನುಮೋದನೆ ನೀಡಿದೆ.

| **ಕ್ರಮ ಸಂಖ್ಯೆ** | **ಸರ್ಕಾರದ ಅನುಮೋದನೆ ಸಂಖ್ಯೆ** | **ಹುದ್ದೆಯ ಹೆಸರು** | **ಒಟ್ಟು ಹುದ್ದೆಗಳು** |
|---|---|---|---|
| 01 | ನಅಇ 139 ಎಂ.ಎನ್.ವೈ 2005, ಬೆಂಗಳೂರು, ದಿನಾಂಕ : 04–06–2009 | ಶುಶ್ರೂಷಕಿಯರು (Staff Nurse) | 30 |
| | | ಎ.ಎನ್.ಎಂ (ANM) | 63 |
| | | ಫಾರ್ಮಾಸಿಸ್ಟ್ (Pharmacist) | 01 |

| | | | |
|---|---|---|---|
| | | ಸಬ್–ರಿಜಿಸ್ಟರ್ (Sub Registrars) | 26 |
| | | ಸ್ಪೆಷಲ್ ಗ್ಯಾಂಗ್‌ಮನ್ (Special Gangman) | 58 |
| | | ಎಂ.ಸಿ.ಗ್ಯಾಂಗ್‌ಮನ್ (M.C.Gangman) | 258 |
| | | ಎ.ಎಲ್.ಒ.ಗ್ಯಾಂಗ್‌ಮನ್ (ALO Gangman) | 268 |
| | | ಸೈನೋಪಿಸಿಸ್ ಗ್ಯಾಂಗ್‌ಮನ್ (Synopsis Gangman) | 06 |
| | | ಡಿಸ್‌ಇನ್ಫೆಕ್ಟೆಂಟ್ ಗ್ಯಾಂಗ್‌ಮನ್ (Disinfectant Gangman) | 13 |
| | | ಪ್ರೌಢಶಾಲಾ ಶಿಕ್ಷಕರು | 122 |
| | | ಪ್ರಾಥಮಿಕ ಶಿಕ್ಷಕರು | 90 |
| | | ನರ್ಸರಿ ಶಿಕ್ಷಕರು | 89 |
| 02 | ನಅಇ 373 ಎಂ.ಎನ್.ವೈ 2007<br>ದಿನಾಂಕ : 13–01–2010 | ಪೌರಕಾರ್ಮಿಕರು | 4000 |
| | | **ಒಟ್ಟು ಹುದ್ದೆಗಳ ಸಂಖ್ಯೆ** | **5024** |



-11-

ಮೇಲ್ಕಂಡಂತಹ ಹುದ್ದೆಗಳನ್ನು ನೇರ ನೇಮಕಾತಿಯಿಂದ ತುಂಬಿಕೊಳ್ಳಲು ನೇರ ನೇಮಕಾತಿ ಸಮಿತಿಯನ್ನು ರಚಿಸಬೇಕಾಗಿರುತ್ತದೆ. ಹಾಗೂ ಈ ಹಿಂದೆ 1997 ರಲ್ಲಿ ನಗರಪಾಲಿಕೆಯ ಪ್ರತಿನಿಧಿಗಳನ್ನೊಳಗೊಂಡಂತೆ ನೇಮಕಾತಿ ಸಮಿತಿಯನ್ನು ರಚಿಸಲಾಗಿದ್ದು, ಸದರಿ ಸಮಿತಿಯ ಈ ಕೆಳಕಂಡಂತೆ ಅಧಿಕಾರಿ–ಸದಸ್ಯರು ಹಾಗೂ ಅಧಿಕಾರೇತರ–ಸದಸ್ಯರನ್ನೊಳಗೊಂಡಿತ್ತು.

**<u>ಅಧಿಕಾರಿಗಳು – ಸದಸ್ಯರು</u>**

| | | |
|---|---|---|
| 01 | ಜಂಟಿ ಆಯುಕ್ತರು, ಬೆಂಗಳೂರು ಮಹಾನಗರ ಪಾಲಿಕೆ. | ಅಧ್ಯಕ್ಷರು (ಚೇರ್‌ಮನ್) |
| 02 | ಉಪ ಆಯುಕ್ತರು (ಆಡಳಿತ), ಬೆಂಗಳೂರು ಮಹಾನಗರ ಪಾಲಿಕೆ. | ಮೆಂಬರ್ ಸೆಕ್ರೆಟರಿ |
| 03 | ಇಲಾಖಾ ಮುಖ್ಯಸ್ಥರು<br>(ನೇಮಕಾತಿಗೆ ಸಂಬಂಧಪಟ್ಟ ಇಲಾಖಾ ಮುಖ್ಯಸ್ಥರು ನೇಮಕಾತಿ ಸಮಿತಿಗೆ ಸದಸ್ಯರಾಗಬೇಕು). | ಸದಸ್ಯರು |
| 04 | ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿ, ಬೆಂಗಳೂರು ನಗರ ಜಿಲ್ಲೆ. | ಸದಸ್ಯರು |

**<u>ಅಧಿಕಾರೇತರ – ಸದಸ್ಯರು</u>**

| | | |
|---|---|---|
| 01 | ಶ್ರೀಮತಿ. ಸರಳಾ ಪ್ರಕಾಶ್ | ನಗರಸಭೆ ಸದಸ್ಯರು, ವಾರ್ಡ್ ಸಂಖ್ಯೆ–71 |
| 02 | ಶ್ರೀಮತಿ. ವಿಜಯಲಕ್ಷ್ಮಿ | ನಗರಸಭೆ ಸದಸ್ಯರು, ವಾರ್ಡ್ ಸಂಖ್ಯೆ–68 |

| | | |
|---|---|---|
| 03 | ಶ್ರೀಮತಿ. ಎಂ. ಜಹೀದಾ | ನಗರಸಭೆ ಸದಸ್ಯರು, ವಾರ್ಡ್ ಸಂಖ್ಯೆ–69 |
| 04 | ಶ್ರೀ. ಎಸ್. ಲೋಕೇಶ್ | ನಗರಸಭೆ ಸದಸ್ಯರು, ವಾರ್ಡ್ ಸಂಖ್ಯೆ–34 |
| 05 | ಶ್ರೀ. ಸಿ.ಎಸ್. ಸದಾಶಿವ | ನಗರಸಭೆ ಸದಸ್ಯರು, ವಾರ್ಡ್ ಸಂಖ್ಯೆ–49 |
| 06 | ಶ್ರೀ. ಡಿ.ಜಿ. ಕ್ರಿಸ್ಟೂಫರ್ ಚಕ್ರವರ್ತಿ | ನಗರಸಭೆ ಸದಸ್ಯರು, ವಾರ್ಡ್ ಸಂಖ್ಯೆ–25 |
| 07 | ಶ್ರೀ. ಎನ್. ಮಂಜುನಾಥ ರೆಡ್ಡಿ | ನಗರಸಭೆ ಸದಸ್ಯರು, ವಾರ್ಡ್ ಸಂಖ್ಯೆ–66 |

ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ ಸರ್ಕಾರವು ಅನುಮೋದನೆ ನೀಡಿರುವ ಆರೋಗ್ಯ ಇಲಾಖೆ ಹಾಗೂ ವಿದ್ಯಾ ಇಲಾಖೆಯಲ್ಲಿ ಖಾಲಿ ಇರುವ ಗ್ರೂಪ್–ಸಿ ಹಾಗು ಗ್ರೂಫ್–ಡಿ ಹುದ್ದೆಗಳನ್ನು ಆದಷ್ಟು ಬೇಗನೆ ನೇರ ನೇಮಕಾತಿಯಿಂದ ತುಂಬಿ ಕೊಳ್ಳಬೇಕಾಗಿರುತ್ತದೆ. ಆದುದರಿಂದ **ಈ ಕೆಳಂಡ ಅಧಿಕಾರಿ–ಸದಸ್ಯರನ್ನೊಳಗೊಂಡಂತೆ ಹಾಗೂ ಅಧಿಕಾರೇತರ ಸದಸ್ಯರನ್ನು ಆಯ್ಕೆಮಾಡಿ ನೇಮಕಾತಿ ಸಮಿತಿಯನ್ನು ರಚಿಸಬೇಕಾಗಿರುತ್ತದೆ.**

## ಅಧಿಕಾರಿ – ಸದಸ್ಯರು

| | | |
|---|---|---|
| 01 | ಅಪರ ಆಯುಕ್ತರು (ಆಡಳಿತ). | ಅಧ್ಯಕ್ಷರು |
| 02 | ಉಪ ಆಯುಕ್ತರು (ಆಡಳಿತ). | ಸದಸ್ಯರು |
| 03 | ಸಹಾಯಕ ಆಯುಕ್ತರು ನೇಮಕಾತಿ & ವಿಚಾರಣೆ) | ಸದಸ್ಯ ಕಾರ್ಯದರ್ಶಿ |
| 04 | ಇಲಾಖಾ ಮುಖ್ಯಸ್ಥರು | ಸದಸ್ಯರು |
| 05 | ಜಿಲ್ಲಾ ಸಮಾಜ ಕಲ್ಯಾಣ ಅಧಿಕಾರಿ, ಬೆಂಗಳೂರು ನಗರ ಜಿಲ್ಲೆ | ಸದಸ್ಯರು |
| 06 | ಜಿಲ್ಲಾಧಿಕಾರಿ, ಹಿಂದುಳಿದ ವರ್ಗಗಳು ಹಾಗೂ ಅಲ್ಪಸಂಖ್ಯಾತರ ಇಲಾಖೆ, ಬೆಂಗಳೂರು ನಗರ | ಸದಸ್ಯರು |





## ಅಧಿಕಾರೇತರ – ಸದಸ್ಯರು

ನಗರಪಾಲಿಕೆಗೆ ಚುನಾಯಿತ ಪ್ರತಿನಿಧಿಗಳು ಆಯ್ಕೆಯಾಗಿರುವುದರಿಂದ 1997 ರಲ್ಲಿ ರಚನೆಯಾದ ನೇಮಕಾತಿ ಸಮಿತಿಯಂತೆ **07 ಮಂದಿ ಅಧಿಕಾರೇತರ ಸದಸ್ಯರನ್ನು ಆಯ್ಕೆ ಮಾಡಿ** ಹಾಗೂ ಮೇಲ್ಕಂಡ ಅಧಿಕಾರಿ–ಸದಸ್ಯರನ್ನೊಳಗೊಂಡಂತೆ **ನೇಮಕಾತಿ ಸಮಿತಿಯನ್ನು ರಚಿಸುವಂತೆ ಕೋರಿ** ಮಂಡಿಸಿರುವ ಟಿಪ್ಪಣಿ.

**–ಮುಂದೂಡಿದೆ–**

(ಪಿ.ಎನ್.ಸದಾಶಿವ)
ಅಧ್ಯಕ್ಷರು
ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ